

"ಸಾರ್ವಜನಿಕರ, ಸಹಕಾರ ತತ್ವ ಹಾಗೂ ಸಹಕಾರಿಗಳ ವಿಶೇಷವಾಗಿ ರೈತರ, ಸಮಾಜದ ಹಿಂದುಳಿದ ವರ್ಗದವರ ಮಹಿಳೆಯರ ಹಿತವನ್ನು ಗಮನದಲ್ಲಿರಿಸಿ, ರಾಜಕೀಯವನ್ನು ದೂರವಿರಿಸಿ, ಪಕ್ಷಾತೀತವಾಗಿ ಸಹಕಾರ ಕಾಯ್ದೆಗಳ ನೀತಿ ನಿಯಮಗಳ ರಚನೆಗೆ ಹೆಚ್ಚಿನ ಆದ್ಯತೆ ನೀಡಿ ತಾವುಗಳು ಕಾರ್ಯನಿರ್ವಹಿಸುವಿರಾಗಿ ಸಹಕಾರ ಕ್ಷೇತ್ರ ಅಪೇಕ್ಷಿಸುತ್ತದೆ ಹಾಗೂ ಈ ಬಗ್ಗೆ ಹೆಚ್ಚಿನ ವಿಶ್ವಾಸವನ್ನು ಹೊಂದಿದೆ."

## ಕರ್ನಾಟಕ ರಾಜ್ಯ ವಿಧಾನ ಸಭೆಗೆ ನೂತನ ಶಾಸಕರಾಗಿ ಆಯ್ಕೆಯಾಗಿರುವ ಎಲ್ಲಾ ಸಹಕಾರಿಗಳಿಗೆ ಅಭಿನಂದನೆಗಳು – ಸಹಕಾರ ಕ್ಷೇತ್ರದ ಬಲಸಂವರ್ಧನೆಗೆ ತಮ್ಮಲ್ಲಿ ರಾಜ್ಯದ ಸಹಕಾರಿಗಳ ಮನವಿ

ಆತ್ಮೀಯರೇ, ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ವಿಶ್ವಪರಿಸರ ದಿನ ಹಾಗೂ ವಿಶ್ವ ಯೋಗ ದಿನದ ಶುಭಾಶಯಗಳು ಮತ್ತು ನಾಡಿನ ಸಮಸ್ತ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಷಯಗಳು.

ಕರ್ನಾಟಕ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಆಯ್ಕೆಯಾಗಿರುವ ಎಲ್ಲಾ ಶಾಸಕರಿಗೆ ಹಾಗೂ ವಿಶೇಷವಾಗಿ ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಶಾಸಕರಾಗಿ ಆಯ್ಕೆಯಾಗಿರುವ ಎಲ್ಲರಿಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾಗೂ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳನ್ನು ಅತ್ಯಂತ ಸಂತೋಷದಿಂದ ಸಲ್ಲಿಸುತ್ತೇನೆ.

ಸಹಕಾರ ಕ್ಷೇತ್ರದ ಸಾಧನೆಗಳನ್ನು, ಸಹಕಾರ ಕ್ಷೇತ್ರದ ಕಾರ್ಯನಿರ್ವಹಣೆಯ ವಿಧಿ–ವಿಧಾನಗಳನ್ನು ಹಾಗೂ ಅದರ ಅವಶ್ಯಕತೆಯನ್ನು, ಸಾರ್ವಜನಿಕರಿಗೆ ಹಲವಾರು ರೀತಿಯಲ್ಲಿ ನೆರವಾಗುತ್ತಿರುವ, ಸರಕಾರದ ಅನೇಕ ಕಾರ್ಯಕ್ರಮಗಳ ಅನುಷ್ಠಾನದ ಸಾಧನವಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ದೇಶದ ಅರ್ಥ ವ್ಯವಸ್ಥೆಯಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬೃಹದಾಕಾರವಾಗಿ ಬೆಳೆದಿರುವ ಈ ಸಹಕಾರ ಕ್ಷೇತ್ರವನ್ನು ಬಲಪಡಿಸುವತ್ತ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಾ ಇದೀಗ ಶಾಸಕರಾಗಿ ಆಯ್ಕೆಯಾದ ಮಹನೀಯರೆಲ್ಲರಲ್ಲಿಯೂ ರಾಜ್ಯದ ಎಲ್ಲಾ ಸಹಕಾರಿಗಳ ಪರವಾಗಿ ಪ್ರಾರ್ಥಿಸುತ್ತೇನೆ.

ಸಾರ್ವಜನಿಕರ, ಸಹಕಾರ ತತ್ವ ಹಾಗೂ ಸಹಕಾರಿಗಳ ವಿಶೇಷವಾಗಿ ರೈತರ, ಸಮಾಜದ ಹಿಂದುಳಿದ ವರ್ಗದವರ ಮಹಿಳೆಯರ ಹಿತವನ್ನು ಗಮನದಲ್ಲಿರಿಸಿ, ರಾಜಕೀಯವನ್ನು ದೂರವಿರಿಸಿ, ಪಕ್ಷಾತೀತವಾಗಿ ಸಹಕಾರ ಕಾಯ್ದೆಗಳ ನೀತಿ ನಿಯಮಗಳ ರಚನೆಗೆ ಹೆಚ್ಚಿನ ಆದ್ಯತೆ ನೀಡಿ ತಾವುಗಳು ಕಾರ್ಯನಿರ್ವಹಿಸುವಿರಾಗಿ ಸಹಕಾರ ಕ್ಷೇತ್ರ ಅಪೇಕ್ಷಿಸುತ್ತದೆ ಹಾಗೂ ಈ ಬಗ್ಗೆ ಹೆಚ್ಚಿನ ವಿಶ್ವಾಸವನ್ನು ಹೊಂದಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಅನೇಕ ಹಿರಿಯರಾದ ಮಾನ್ಯ ಶ್ರೀ ಮುರುಗೇಶ ನಿರಾಣಿ, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಬಸನಗೌಡ ಪಾಟೀಲ ಯತ್ನಾಳ, ಶ್ರೀ ಪರಣ್ಣ ಮುನವಳ್ಳಿ, ಶ್ರೀಮತಿ ಶಶಿಕಲಾ ಜೊಲ್ಲೆ, ಶ್ರೀ ಪ್ರತಾಪಗೌಡ ಪಾಟೀಲ, ಶ್ರೀ ಮಹಂತೇಶ ದೊಡ್ಡಗೌಡರ, ಶ್ರೀ ಸುನೀಲ ಕುಮಾರ, ಶ್ರೀ ವೇದವ್ಯಾಸ ಕಾಮತ್, ಶ್ರೀ ಸುಕುಮಾರ ಶೆಟ್ಟಿ ಹಾಗೂ ಇನ್ನೂ ಕೆಲವು ಮಹನೀಯರು ಇರಬಹುದು. ತಮಗೆಲ್ಲಾ ವಿಶೇಷವಾಗಿ ಸಂಯುಕ್ತ ಸಹಕಾರಿಯು ಅಭಿನಂದಿಸುತ್ತದೆ.

ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯಕ್ಕೆ ಅನುಗುಣವಾಗಿ ಕೆಲವು ತಿದ್ದುಪಡಿಗಳ ಅಗತ್ಯವಿದೆ. ಈ ಬಗ್ಗೆ ಮಾನ್ಯ ನಿಬಂಧಕರ ಹಂತದಲ್ಲಿ ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇವರುಗಳ ಜೊತೆಗೆ ಚರ್ಚೆಯಾಗಿದೆ. ಅಧಿಕಾರಿಗಳ ಹಂತದಲ್ಲಿ ಈ ಅಗತ್ಯ ತಿದ್ದುಪಡಿಗಳು ಒಪ್ಪಿಗೆಯಾಗಿವೆ. ಸಚಿವ ಸಂಪುಟದ ಒಪ್ಪಿಗೆ ಹಾಗೂ ವಿಧಾನ ಮಂಡಳದ ಒಪ್ಪಿಗೆ ಪಡೆಯುವ ಹಂತದಲ್ಲಿರುವುದರಿಂದ ತಮ್ಮಗಳ ವಿಶೇಷ ಆಸಕ್ತಿ ಹಾಗೂ ಪ್ರೋತ್ಸಾಹದ ಅಗತ್ಯ ಇದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಶಾಸಕರ ಗಮನ ಸೆಳೆಯುವುದರಲ್ಲಿ ಸಂಯುಕ್ತ ಸಹಕಾರಿಯ ಜೊತೆಗೆ ಸಹಕಾರ ನೀಡಬೇಕಾಗಿ ಸಂಯುಕ್ತ ಸಹಕಾರಿಯು ಬಯಸುತ್ತದೆ.

– ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು.